ಈ ದಿನ ದಿನಾಂಕಃ 09-12-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>**

5. ವಾದಿಗಳು ಕರೇಗೌಡರ ಮಗ ಹನುಮಂತಪ್ಪನವರ ವಾರಸುದಾರರೆಂದರೆ ಸರಿ. ಪ್ರತಿವಾದಿಗಳು ಕರಿಯಪ್ಪ ಕೃಷ್ಣಪ್ಪನವರ ವಾರಸುದಾರರೆಂದರೆ ಸರಿ. ದಾವಾ ಆಸ್ತಿಗಳೆಲ್ಲವೂ ಒಟ್ಟುಕುಟುಂಬದ ಆಸ್ತಿಗಳು ಎಂದರೆ ಸರಿ. ಆದ್ದರಿಂದ ವಾದಿಗಳಿಗೆ ಮೂರನೇ ಒಂದು ಹಿಸ್ಸಾ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಹಿಸ್ಸೆಯನ್ನು ಈಗಾಗಲೇ ಕೊಡಲಾಗಿದೆ ಎಂದು ನುಡಿಯುತ್ತಾರೆ. ಎರಡನೇ ಮೂರು ಹಿಸ್ಸಾ ಹಕ್ಕು ಪ್ರತಿವಾದಿಗಳುಹೊಂದಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈಗಾಗಲೇ ಹಿಸ್ಸಾ ಹಕ್ಕು ಹಂಚಿಕೆಯಾಗಿದೆ ಎಂದು ನುಡಿಯುತ್ತಾರೆ. ಹಿಸ್ಸಾ ಹಂಚಿಕೆಯಾಗದ ಹಿನ್ನೆಲೆಯಲ್ಲಿ ಪ್ರಶ್ನಿತ ಹಿಸ್ಸಾ ಪತ್ರದಂತೆ ಯಾವುದೇ ಪ್ರಕ್ರಿಯೇ ನಡೆಯದ ಕಾರಣ 2019 ರಲ್ಲಿ ವಾದಿಗಳು ತಮ್ಮ ಹಿಸ್ಸಾ ಹಕ್ಕನ್ನು ಬೇಡಿದ್ದಾರೆಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಈ ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.